ಜನತೆಯನ್ನು ನೇಣು ಹಾಕುವುದು ಅಂತಿಮ ಕುಣಿಕೆಯಲ್ಲಿದೆ. ಅದನ್ನು ಯಾವ ರೀತಿ ಸರಿಪಡಿಸಿಕೊಳ್ಳುತ್ತಾರೆ, ಸಮಾಧಾನಕರವಾದ ಉತ್ತರ ಏನು ಕೊಡುತ್ತಾರೆಂದು ಕಾದು ನೋಡುತ್ತೇನೆ. ಇವತ್ತಿನ ಈ ಒಂದು ಸಂದರ್ಭದಲ್ಲಿ ಯಾವ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ, ಇವತ್ತು ಗೌರವಾನ್ವಿತ ಸಭಾಧ್ಯಕ್ಷರು ನನಗೆ ಮಾತನಾಡಲು ದೊಡ್ಡ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಮೊದಲನೇ ಸಲ ನನ್ನ ಭಾವನೆಗಳನ್ನು ಇವತ್ತು, ಈ ಒಂದು ವಿರೋಧ ಪಕ್ಷದ ಸ್ಥಾನದಿಂದ ನಮ್ಮ ತಂದೆಯವರು 5–7 ವರ್ಷಗಳ ಕಾಲ ಈ ಜಾಗದಿಂದ ಕೆಲಸವನ್ನು ನಿರ್ವಹಿಸಿದ್ದರು, ಆ ಒಂದು ಸ್ಥಾನದಲ್ಲಿ ನಿಂತು ನನ್ನ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ನನಗೊಂದು ಅವಕಾಶ ಕೊಟ್ಟು ಸಂಪೂರ್ಣ ರಕ್ಷಣೆ ಕೊಟ್ಟಿದ್ದೀರಿ, ನಿಮಗೆ ಸಂಪೂರ್ಣವಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ಇವತ್ತು ನನ್ನ ಕೆಲವೊಂದು ಭಾವನೆಗಳನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5. ಶಾಸನ ರಚನೆ

ವಿಧೇಯಕದ ಮಂಡನೆಗೆ ಅನುಮತಿ ಕೋರಿಕೆ.

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ವಿ.ದೇಶಪಾಂಡೆ [ಉನ್ನತ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, 2013ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ [ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ] (ವಿಶೇಷ ಉಪಬಂಧಗಳು) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಗಿದೆ.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ: 2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ [ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ] [ವಿಶೇಷ ಉಪಬಂಧಗಳು]ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಪ್ರಸ್ತಾವವು ಅಂಗೀಕೃವಾಗಿದೆ

ಮಂತ್ರಿ ಅವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–1)

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಸದಸ್ಯರು ಒಪ್ಪಿಕೊಂಡರೆ ಪಾಸ್ ಮಾಡಲು ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ನಾನು ಮುಂದುವರೆಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : ಈಗಾಗಲೇ 2006 Act ಬಂದ ನಂತರ ಪ್ರತಿ ವರ್ಷ ನಾವು consensual agreement ಮಾಡಿಕೊಂಡು abeyance ನಲ್ಲಿ ಇಡುತ್ತಿದ್ದೇವೆ, ಏಕೆಂದರೆ...

ಶ್ರೀ ಸಿ.ಟಿ.ರವಿ : ಚರ್ಚೆ ಇಲ್ಲ, ಎರಡು clarifications ಇದೆ.

ಶ್ರೀ ಜಗದೀಶ್ ಶೆಟ್ಟರ್ : ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ : ಈ ಬಿಲ್ ಈ ಮನೆಯಿಂದ ಪಾಸ್ ಆಗಿ ಮೇಲ್ಮನೆಗೆ ಹೋಗಬೇಕಾಗಿದೆ, ಇದು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ದೃಷ್ಟಿಯಿಂದ ಬೇಗ ಆಗಬೇಕು..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬೇಕಾದರೆ 5 ಗಂಟೆ ಮೇಲೆ ತೆಗೆದುಕೊಳ್ಳಲಿ, ಒಂದು ಚರ್ಚೆ ಆರಂಭವಾದರೆ ಮತ್ತೆ ತರಬೇಕಾಗುತ್ತದೆ, ನಾನು ಮೊನ್ನೆಯೇ request ಮಾಡಿಕೊಂಡಿದ್ದೇನೆ, ನಾಳೆ ನಾನು ಇರುವುದಿಲ್ಲ ಅದಕ್ಕೆ ನಾನು ಮಾತನಾಡಿ ಮುಗಿಸುತ್ತೇನೆ, ಆಮೇಲೆ ಬೇಕಾದರೆ ತೆಗೆದುಕೊಳ್ಳಿ